**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ 536/2024**

ಫಿರ್ಯಾದಿಃ ಮ್ಯಾನೇಜರ್
ನವೋದಯ ಮಲ್ಟಿಪರ್ಪಸ್,
ಸೌಹಾರ್ದ ಸಹಕಾರಿ ನಿಯಮಿತ,
ಹೊನ್ನಾವರ.

**-ವಿರುದ್ಧ-**

ಆರೋಪಿಃ ಹನುಮಂತ ಕೇಶವ ತಾಂಡೇಲ,
ಸಾಕೀನಃ ಕಾಸರಕೋಡ, ಟೊಂಕಾ,
ತಾಲೂಕುಃ ಹೊನ್ನಾವರ.

**ಆರೋಪಣೆ**

ಶ್ರೀ ಬಿ.ಸಿ. ಚಂದ್ರಶೇಖರ್, ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡ ಆರೋಪಣೆಯನ್ನ ಹೊರಿಸುತ್ತಿದ್ದೇನೆ.

ಆರೋಪಿಯು ಪಿರ್ಯಾದಿಯ ಬ್ಯಾಂಕಿನಲ್ಲಿ ರೂ.85,175/-ಗಳನ್ನು ಸಾಲವಾಗಿ ತೆಗೆದುಕೊಂಡಿದ್ದು, ಸದರಿ ಹಣದ ಮರುಪಾವತಿಗಾಗಿ ವಿಜಯ ಬ್ಯಾಂಕ್ ಹೊನ್ನಾವರ ಶಾಖೆಯ ನಿಮ್ಮ ಖಾತೆಯ ದಿನಾಂಕಃ24-03-2021ರಂದು 779822 ನಂಬರಿನ ಚೆಕ್‌ನ್ನು ನೀಡಿದ್ದು, ಸದರಿ ಚೆಕ್ಕನ್ನು ಬ್ಯಾಂಕಿಗೆ ಹಾಕಿದ ಕೂಡಲೇ ಹಣ ಬಟವಡೆಯಾಗುತ್ತದೆ ಎಂಬ ಭರವಸೆ ನೀಡಿದ್ದು, ಪಿರ್ಯಾದಿಯು ಆರೋಪಿಯ ಮಾತಿನ ಮೇಲೆ ನಂಬಿಕೆ, ವಿಶ್ವಾಸ ಇಟ್ಟು, ದಿನಾಂಕಃ31-03-2021ರಂದು ಸದರಿ ಚೆಕ್ಕನ್ನು ಪಿರ್ಯಾದಿದಾರರು ಕೆನರಾ ಜಿಲ್ಲಾ ಕೇಂದ್ರ ಕೋ-ಆಪ್ ಬ್ಯಾಂಕ್ ಲಿಮಿಟೆಡ್ ಶಿರಸಿ, ಹೊನ್ನಾವರ ಶಾಖೆಗೆ ಸಲ್ಲಿಸಿದಾಗ ಅದು ನಗದೀಕರಣಗೊಳ್ಳದೆ "Funds Insufficient" ಎಂಬ ಲಿಖಿತ ಹಿಂಬರಹದೊಂದಿಗೆ ವಾಪಾಸ್ ಬಂದಿದ್ದು, ನಂತರ ಪಿರ್ಯಾದಿಯವರು ಚೆಕ್ಕಿನ ಹಣವನ್ನು ವಾಪಾಸು ಮಾಡುವಂತೆ ದಿನಾಂಕಃ 08-04-2021ರಂದು ನೋಟಿಸ್ ನೀಡಿದ್ದು ಅದು ನಿಮಗೆ ದಿನಾಂಕಃ 09-04-2021ರಂದು ತಲುಪಿದ್ದರೂ ಸಹ ನೀವು ಕೊಡಬೇಕಾದ ಹಣವನ್ನು ಮರುಪಾವತಿಸದೆ ಪಿರ್ಯಾದಿದಾರರಿಗೆ ಮೋಸ ಮಾಡಿದ್ದು, ಈ ಮೂಲಕ ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ 420ರಡಿ ಮತ್ತು ನೆಗೋಶಿಯೆಬಲ್ ಇನ್ಸ್ಟ್ರುಮೆಂಟ್ ಕಾಯಿದೆ ಕಲಂ 138ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಪ್ರಶ್ನೆ 1. ಮೇಲೆ ಓದಿ ಹೇಳಲಾದ ನಿಮ್ಮ ಮೇಲಿನ ಆರೋಪಣೆಯನ್ನ ಒಪ್ಪಿಕೊಳ್ಳುವಿರಾ?

ಉತ್ತರಃ

ಪ್ರಶ್ನೆ 2. ನಿಮ್ಮ ಪರವಾಗಿ ಯಾವುದಾದರೂ ಪ್ರತಿರಕ್ಷ ಸಾಕ್ಷ್ಯ ಇದೆಯೆ?

ಉತ್ತರಃ

**(ಈ ಮೂಲಕ ದೃಢೀಕರಿಸುವುದೇನೆಂದರೆ ಮೇಲ್ಕಂಡ ಆರೋಪಣೆಯನ್ನ ನನ್ನ ಸಮಕ್ಷಮ ಆರೋಪಿಗೆ ಓದಿ ಹೇಳಿ, ಕೇಳಲಾಗಿ ಆತನು ನೀಡಿದ ಉತ್ತರವನ್ನ ನನ್ನ ಹಸ್ತಾಕ್ಷರದಲ್ಲಿ ಬರೆದುಕೊಳ್ಳಲಾಯಿತು.)**

**ಸಹಿ ಇದೆ.**

ದಿನಾಂಕಃ 19-09-2024.

ಸ್ಥಳಃ ಹೊನ್ನಾವರ

**(ಶ್ರೀ ಬಿ.ಸಿ. ಚಂದ್ರಶೇಖರ್,)**
**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ.**